ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

**ಸಿ.ಸಿ. ನಂ. 2111/2025 ಸಿ. ಡಬ್ಲ್ಯೂ: 3 ಪಿ ಡಬ್ಲ್ಯೂ : 3**

ದಿನಾಂಕ: 13/05/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ಶ್ರೀ ಸಿ ಎಸ್ ಪಿ ವಕೀಲರಿಂದ:

3. ನಾನು ನ್ಯಾಯಾಲಯಕ್ಕೆ ಚಾಸಾ 1 ಮತ್ತು 2 ಅವರ ಜೊತೆ ಬಂದಿದ್ದೇನೆ ಎಂದರೆ ಸರಿ. ಚಾಸಾ 1 ಮತ್ತು ಮೃತ ಪ್ರಕಾರ ನಮ್ಮ ಊರಿನವರು ಎಂದರೆ ಸರಿ. ಗದಗ ನ್ಯಾಯಾಲಯದಲ್ಲಿ ಚಾಸಾ 1 ಮೃತ ಪ್ರಕಾಶನ ಅಪಘಾತಕ್ಕೆ ಸಂಬಂಧಪಟ್ಟಂತೆ ಪರಿಹಾರ ಕೋರಿ ಅರ್ಜಿ ಹಾಕಿದ್ದು, ಸದರಿ ಅರ್ಜಿಗೆ ಅನುಕೂಲವಾಗಲಿ ಎಂದು ನಾನು ಶವ ಪಂಚನಾಮೆ ಹಾಗೂ ಸ್ಥಳ ಪಂಚನಾಮೆಯ ಕಾಲಕ್ಕೆ ಹಾಜರಿದ್ದು, ಸಹಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಂದಗೋಳ ಪೋಲೀಸ್ ಠಾಣೆಯಲ್ಲಿ ಪಂಚರಾಗುವಂತೆ ನನಗೆ ನೋಟೀಸ ಕೊಟ್ಟಿದ್ದರು. ಆಗ ಸಮಯ ಬೆಳಿಗ್ಗೆ 07-00 ಗಂಟೆ ಆಗಿತ್ತು. ಅಪಘಾತದ ದಿನ ಕಿಮ್ಸ ಆಸ್ಪತ್ರೆಗೆ ಹೋಗಿದ್ದೆ. ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. 05-30 ಕ್ಕೆ ಶವ ನೋಡಿದ್ದೇನೆ ಎಂದು ಶವ ಪಂಚನಾಮೆಯಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ನೆನಪಿಲ್ಲ. ಪಂಚನಾಮೆಯನ್ನು ಪೋಲೀಸರು ಬರೆದಿದ್ದು, ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ಅವರ ಹೆಸರು ಗೊತ್ತಿಲ್ಲ. ಮಾಹಿತಿ ನಾನು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಶವ ಹಾಗೂ ಸ್ಥಳ ಪಂಚನಾಮೆ ಮಾಡಿಲ್ಲ, ಪೋಲೀಸರು ಠಾಣೆಯಲ್ಲಿ ತಯಾರಿಸಿದ ಪಂಚನಾಮೆಗೆ ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆ ಮಾಡಿದಾಗ ಸಮಯ ಬೆಳಿಗ್ಗೆ 08-00 ರಿಂದ 09-00 ಆಗಿತ್ತು. ಸಾಕ್ಷಿ ಪುನಃ ಹೇಳುತ್ತಾರೆ ಬೆಳಿಗ್ಗೆ 11-00 ರಿಂದ 12-00 ಗಂಟೆ ಆಗಿತ್ತು.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.